1	2	3	4
21	ಕೊಂಪನಪಲ್ಲಿ	ಚೆಕ್‌ಡ್ಯಾಂ–1	0 300
22.	ಹಣಮನಳ್ಳಿ	ಚೆಕ್‌ಡ್ಯಾಂ -1	0 650
		ಒಟ್ಟು	**15 501**

ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಇನ್ನು ಮುಂದೆ ಆರಂಭಿಕ ಚಟುವಟಿಕೆ, ತರಬೇತಿ, ಅರಣ್ಯ ಮತ್ತು ತೋಟಗಾರಿಕೆ (ಮುಂಗಡ ಕೆಲಸ) ಹಾಗೂ ಭೂಸಾರ ಸಂರಕ್ಷಣ ಕಾಮಗಾರಿಗಳನ್ನು ರೂ 8 219 ಲಕ್ಷಗಳಿಗೆ ತೆಗೆದುಕೊಳ್ಳಲಾಗುವುದು

ನಬಾರ್ಡ್ ಯೋಜನೆಯಡಿ ರೂ 1 77 ಲಕ್ಷಗಳ ಕಾಮಗಾರಿಗಳನ್ನು ತಗೆಯಕೊಳ್ಳಬೇಕಾಗಿದೆ

ಸೂಚನೆ ಸಪಾ–ಸಮಪಾತಳಿ ಬದು, ತಿ ಗಾ ತಿರುವುಗಾಲುವೆ, ಬಿಸಿ–ಬೋಲ್ಡರ್ ಚೆಕ್, ಆರ್ ಸಿ–ರಬಲ್ ಚೆಕ್, ಸಿಡಿ- ಡ್ಯಾಂ ಆರ್‌ವಿಪಿ ರಿವರ್ ವ್ಯಾಲಿ ಪ್ರಾಜೆಕ್ಟ್ ಡಿಪಿಎಪಿ ಬರಪೀಡಿತ ಪ್ರದೇಶಾಬಿವೃದ್ಧಿ ಯೋಜನೆ ಐಡಬ್ಲ್ಯೂಡಿಪಿ ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ, ಆರ್ ಆರ್ ಎಸ್–ಎಎಸ್ ರೆಕ್ಲಿಮೇಶನ್ ಸ್ಟ್ರಕ್ಚರ್ ವಿಸಿಡಿ–ವೆಜಿಟೆಟಿವ್ ಚೆಕ್ ಡ್ಯಾಂಎನ್‌ಟಿ– ನಾಲ ಟ್ರೈನಿಂಗ್ ಡಬ್ಲ್ಯು ಡಬ್ಲು ವೇಸ್ಟ್ ವೇರ್

ಷೋರಾಪುರ ತಾಲ್ಲೂಕಿನಲ್ಲಿ ಬರಗಾಲದಿಂದ ಉಂಟಾದ ನಷ್ಟದ ಬಗ್ಗೆ

524 (152) ಶ್ರೀ ರಾಜಾರಾವೆಂಕಟಪ್ಪ ನಾಯಕ್ (ಷೋರಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಷೋರಾಪುರ ತಾಲ್ಲೂಕಿನಲ್ಲಿ ಮಳೆಯ ಅಭಾವದ ಕಾರಣ ರೈತರು ಬೆಳೆದಿರುವ ಬೆಳೆಗಳಿಗೆ ಪೂರ್ಣ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಷೋರಾಪುರ ತಾಲ್ಲೂಕಿನಲ್ಲಿ ರೈತರು ಬೆಳೆದಿರುವ ಬೆಳೆ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಎ ಎಸ್ ಕೌಜಲಗಿ (ಕೃಷಿ ಸಚಿವರು)

ಅ) ಬಂದಿದೆ ಶೋರಾಪುರ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಲ್ಲಿ ಮಳೆಯ ಅಭಾವವಿತ್ತು, ಬರಗಾಲದಿಂದ ಸುಮಾರು 26492 ಹೆಕ್ಟೇರ್ ವಿಸ್ತೀರ್ಣದಲ್ಲಿ ಮುಂಗಾರು ಹಾಗೂ ಹಿಂಗಾರು ಬೆಳೆಗಳು ಹಾನಿಗೊಳಪಟ್ಟಿರುತ್ತದೆ

ಆ) ಬೆಳೆ ವಿಮೆ ಯೋಜನೆಯಡಿಯಲ್ಲಿ ನೋಂದಾಯಿಸಿದ ರೈತರಿಗೆ ಬೆಳೆಗಳ ಇಳುವರಿಯಲ್ಲಿ ಉಂಟಾಗಿರುವ ನಷ್ಟದ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ನೀಡಲಾಗುವುದು

ರಾಜ್ಯದ ಗ್ರಾಮೀಣ ಸಾರಿಗೆ ವ್ಯವಸ್ಥೆ

567 (452) ಶ್ರೀ ಅಪ್ಪಚ್ಚು ರಂಜನ್ ಎಂ ಪಿ (ಸೋಮವಾರಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಗ್ರಾಮೀಣ ಸಾರಿಗೆ ಸೌಲಭ್ಯದ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದೆಯೇ,